# ವಾರ್ಷಿಕ ವರದಿ - 2022-23

ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು ಹಳೆ ವಿದ್ಯಾರ್ಥಿ ಸಂಘ (ರಿ.). ಇದರ 2022-23ನೇ ಸಾಲಿನ ವಾರ್ಷಿಕ ವರದಿಯನ್ನು ತಮ್ಮ ಮುಂದೆ ಮಂಡಿಸಲು ಸಂತೋಷ ಪಡುತ್ತೇನೆ.

ಸದಸ್ಯತನ: ಪ್ರಸಕ್ತ ಸುಮಾರು 449 ಅಜೀವ ಸದಸ್ಯರು ಇದ್ದಾರೆ. ಅದರಲ್ಲಿ 7 ಜನ ಪೋಷಕ ಸದಸ್ಯರಾಗಿರುತ್ತಾರೆ.

## ವಾರ್ಷಿಕ ಮಹಾಸಭೆ:

ದಿನಾಂಕ: 09.10.2022ರ ಭಾನುವಾರದಂದು 2021-22ನೇ ಸಾಲಿನ ವಾರ್ಷಿಕ ಮಹಾಸಭೆಯು ಕಾಲೇಜಿನ ಡಾ. ಶಿವರಾಮ ಕಾರಂತ ಸಭಾಭವನದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕರ್ನಲ್ ನಿಟ್ಟೆಗುತ್ತು ಶರತ್ ಭಂಡಾರಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸದ್ರಿ ಸಭೆಗೆ ಕೋರಮ್ ಇಲ್ಲದ ಕಾರಣ ಸಭೆಯನ್ನು ಅರ್ಧ ಘಂಟೆ ಮುಂದೂಡಿದ ಬಳಿಕ ಸರಿಯಾಗಿ ಪೂರ್ವಾಹ್ನ 11.00 ಘಂಟೆಗೆ ವಾರ್ಷಿಕ ಮಹಾಸಭೆಯನ್ನು ಪ್ರಾರಂಭಿಸಲಾಯಿತು.

ಸಂಘದ ಕಾರ್ಯದರ್ಶಿ ಶ್ರೀ ಯು. ಮೋಹನ್ ರಾವ್ 2021-22ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದುಕೊಂಡರು. ತದನಂತರ ಸಂಘದ ಕೋಶಾಧಿಕಾರಿ ಶ್ರೀ ಡಿ. ಶ್ರೀನಿವಾಸ ನ್ಯಾಕ್‌ರವರು ವಾರ್ಷಿಕ ಲೆಕ್ಕಪತ್ರ ಮಂಡಿಸಿ, ಸಭೆಯಲ್ಲಿ ಅನುಮೋದನೆ ಪಡೆದುಕೊಂಡರು.

2022-23ನೇ ಸಾಲಿನ ಮುಂಗಡ ಆಯವ್ಯಯಗಳ ಅಂದಾಜು ಪಟ್ಟಿಯನ್ನು ಕೋಶಾಧಿಕಾರಿಯವರು ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದುಕೊಂಡರು.

2022-23ನೇ ಸಾಲಿಗೆ ಲೆಕ್ಕಪರಿಶೋಧಕರಾಗಿ ಶ್ರೀ ಸುನೀಲ್ ಭಟ್ ಇವರ ಹೆಸರನ್ನು ಸಭೆಯಲ್ಲಿ ಸೂಚಿಸಿ ಅನುಮೋದನೆ ಪಡೆದುಕೊಳ್ಳಲಾಯಿತು. ಸಂಘದ ಅಧ್ಯಕ್ಷರಾದ ಶ್ರೀ ಕರ್ನಲ್ ನಿಟ್ಟೆಗುತ್ತು ಶರತ್ ಭಂಡಾರಿಯವರು ಕಾಲೇಜು ಅಭಿವೃದ್ಧಿ ಬಗ್ಗೆ ಹಮ್ಮಿಕೊಳ್ಳುವ ಕಾರ್ಯಕ್ರಮದಲ್ಲಿ ಹಳೆ ವಿದ್ಯಾರ್ಥಿ ಸಂಘದ ವತಿಯಿಂದ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು. ಅಲ್ಲದೆ ಹಿಂದಿನ ಸಾಲಿನಂತೆ ಬೇರೆ ಬೇರೆ ವಿದ್ಯಾ ಸಂಸ್ಥೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿರುವ ಬಗ್ಗೆ ಸಭೆಗೆ ತಿಳಿಸಿದರು.

ಹಳೆ ವಿದ್ಯಾರ್ಥಿ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ನಮ್ಮೊಂದಿಗೆ ಸಹಕರಿಸಿದ ಕಾಲೇಜಿನ ಪ್ರಾಂಶುಪಾಲರಾದ ಡಾ. ಅನಸೂಯ ರೈ ಹಾಗೂ ಕಾಲೇಜಿನ ಎಲ್ಲಾ ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿಗಳಿಗೆ ಹಾಗೂ ಸಂಘದ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಕೃಷ್ಣಯ್ಯ ಶೆಟ್ಟಿಗಾರ್ ಇವರಿಗೂ ಮತ್ತು ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಸದಸ್ಯರುಗಳಿಗೆ ಸಂಘದ ಉಪಾಧ್ಯಕ್ಷರಾದ ಶ್ರೀ ಆರ್. ಲೋಹಿದಾಸ್ ವಂದನೆ ಸಲ್ಲಿಸಿದರು.

## ಕಾರ್ಯಕಾರಿ ಸಮಿತಿ ಸಭೆಗಳು:

2022-23ನೇ ಸಾಲಿನಲ್ಲಿ ಒಟ್ಟು 5 ಸಭೆಯನ್ನು ನಡೆಸಿ ವಿವಿಧ ವಿಷಯಗಳ ಬಗ್ಗೆ ವಿಚಾರ ವಿನಿಮಯ ಮತ್ತು ನಿರ್ಣಯಗಳನ್ನು ಕೈಗೊಳ್ಳಲಾಯಿತು.

## ಕೊಡುಗೆ:

ಹಳೆ ವಿದ್ಯಾರ್ಥಿಗಳ ವತಿಯಿಂದ ಕಾಲೇಜಿನ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ವಿದ್ಯಾರ್ಥಿವೇತನವನ್ನು ನೀಡಲಾಯಿತು.

| | | |
|---|---|---|
| 1. | ದಿ. ಡಾ. ಡಿ. ಕೆ. ಚೌಟ | ರೂ. 25,000/- |
| 2. | ಕರ್ನಲ್ ನಿಟ್ಟೆಗುತ್ತು ಶರತ್ ಭಂಡಾರಿ | ರೂ. 50,000/- |
| 3. | 1980-83 ಸಾಲಿನ ವಿದ್ಯಾರ್ಥಿಗಳಿಂದ | ರೂ. 3,500/- |
| 4. | ಡಾ. ಪಿ. ದಯಾನಂದ ಪೈ ಮತ್ತು ಸತೀಶ್ ಪೈ | ರೂ. 15,000/- |
| 5. | ಡಾ. ಕೆ. ಬಾಲಕೃಷ್ಣ ಸಹ ಪ್ರಾಧ್ಯಾಪಕರು, ಎಂ.ಐ.ಟಿ., ಮಣಿಪಾಲ | ರೂ. 5,000/- |
| 6. | 1964-65ನೇ ಸಾಲಿನ ಬಿ.ಎಸ್ಸಿ ವಿದ್ಯಾರ್ಥಿಗಳಿಂದ | ರೂ. 15,000/- |
| 7. | ಶ್ರೀಮತಿ ಸುನಂದಾ ಯು. ಸಹ ಪ್ರಾಧ್ಯಾಪಕರು (ನಿವೃತ್ತ ಪ್ರಾಂಶುಪಾಲರು) | ರೂ. 5,000/- |

8. ಡಾ. ಎಂ. ವೀರಪ್ಪ ಮೊಯಿಲಿರವರಿಂದ 8ಗ್ರಾಂ ಗೋಲ್ಡ್ ಕಾಯಿನ್ ನೀಡಲಾಯಿತು.
9. ಕಾಲೇಜಿನಲ್ಲಿ ಶುಚಿತ್ವ ಕೆಲಸ ನಿರ್ವಹಿಸುತ್ತಿರುವ ಶ್ರೀಮತಿ ಸುಜಾತ ಇವರ ಮಗಳು ಕು. ವೀಕ್ಷಿತರವರಿಗೆ ಪ್ರಥಮ ವರ್ಷದ ಸ್ನಾತಕೋತ್ತರ ಪದವಿ ಸೇರ್ಪಡೆಗಾಗಿ ಸಂಘದ ಅಧ್ಯಕ್ಷರಾದ ಶ್ರೀ ಕರ್ನಲ್ ನಿಟ್ಟೆಗುತ್ತು ಶರತ್ ಭಂಡಾರಿಯವರು ವೈಯಕ್ತಿಕವಾಗಿ ರೂ. 10,000/-ನ್ನು ನೀಡಿರುತ್ತಾರೆ.
10. ಕಾಲೇಜಿನಲ್ಲಿ ದ್ವಿತೀಯ ಬಿ.ಕಾಂನಲ್ಲಿ ವ್ಯಾಸಂಗ ಮಾಡುತ್ತಿದ್ದ ಕು. ಮುಫೀದ್ರು ಬಾನು ಇವರು ದಿನಾಂಕ: 17.12.2022ರಂದು ನಿಧನರಾದ ಪ್ರಯುಕ್ತ ಸದ್ರಿ ವಿದ್ಯಾರ್ಥಿನಿಯ ಕುಟುಂಬದವರಿಗೆ ಸಂಘದ ಸದಸ್ಯರು ಹಾಗೂ ಸಂಘದ ವತಿಯಿಂದ ಒಟ್ಟು ರೂ. 15,000/- ನೀಡಲಾಗಿದೆ.
11. ಸಂಘದ ಉಪಾಧ್ಯಕ್ಷರಾದ ಶ್ರೀ ಆರ್. ಲೋಹಿದಾಸ್‌ರವರು ಕಾಲೇಜಿನ ಬಡ ವಿದ್ಯಾರ್ಥಿಗಳ ಬಿಸಿಯೂಟದ ವ್ಯವಸ್ಥೆ ಬಗ್ಗೆ ಕಳೆದ ಸಾಲಿನಲ್ಲಿ(2021-22) ದಾನಿಗಳಿಂದ ಸಂಗ್ರಹಿಸಿದ ರೂ. 75,000/- ಹಾಗೂ ವರದಿ ವರ್ಷದಲ್ಲಿ ಸಂಗ್ರಹಿಸಿದ ರೂ. 25,000/- ದೇಣಿಗೆ ಮೊತ್ತವನ್ನು ಕಾಲೇಜಿಗೆ ಹಸ್ತಾಂತರಿಸಲಾಗಿದೆ.

<u>ಸಂತಾಪ ಸೂಚನೆ:</u>

ವರದಿ ವರ್ಷದಲ್ಲಿ ನಿಧನರಾದ ಗಣ್ಯ ಸದಸ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ನಮನ ಸಲ್ಲಿಸಲಾಯಿತು.

<u>ಇತರ ವಿಷಯಗಳು:</u>

ದಿನಾಂಕ: 02.02.2023ರಂದು ಕಾಲೇಜಿಗೆ ಭೇಟಿ ನೀಡಿದ ನ್ಯಾಕ್ ಪೀರ್ ಸಮಿತಿಯೊಂದಿಗೆ ಹಳೆ ವಿದ್ಯಾರ್ಥಿ ಸಂಘ ನಡೆಸಿದ ಸಂವಾದ ಸಭೆಯಲ್ಲಿ ಹಳೆ ವಿದ್ಯಾರ್ಥಿ ಸಂಘಕ್ಕೆ ಸಂಪೂರ್ಣ 4 ಅಂಕ ದೊರಕಿರುತ್ತದೆ. ನ್ಯಾಕ್ ಪೀರ್ ಸಮಿತಿ ಸದಸ್ಯರು ಹಳೆ ವಿದ್ಯಾಥಿ ಸಂಘದ ಕಾರ್ಯವೈಖರಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ ಎಂದು ತಿಳಿಸಲು ಸಂತೋಷ ಪಡುತ್ತೇನೆ.

ಕಾಲೇಜಿನ ಪ್ರಾಂಶುಪಾಲರಾದ ಡಾ. ಅನಸೂಯ ರೈ ಇವರು ತಮ್ಮ ಪತಿ ದಿ. ಕಿಶೋರ್ ಕುಮಾರ್ ಶೆಟ್ಟಿ ಇವರ ಸ್ಮರಣಾರ್ಥವಾಗಿ ಸಂಘದ ಕಚೇರಿಗೆ 2 Pedestal ಫ್ಯಾನ್ ನೀಡಿರುತ್ತಾರೆ.

ಸಂಘದ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಕೃಷ್ಣಯ್ಯ ಶೆಟ್ಟಿಗಾರ್ ಇವರು ದಿನಾಂಕ: 30.11.2022ರಂದು ವಯೋನಿವೃತ್ತಿಗೊಂಡಿದ್ದು ಸದ್ರಿಯವರನ್ನು ಫಲಪುಷ್ಪದೊಂದಿಗೆ ಸಂಘದ ವತಿಯಿಂದ ಗೌರವಿಸಲಾಯಿತು.

ಮುಂದಿನ ಯೋಜನೆಗಳಿಗಾಗಿ ದಾನಿಗಳಿಂದ ಧನ ಸಹಾಯವನ್ನು ಪಡೆದು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಕಾಲೇಜಿಗೆ ಕಂಪ್ಯೂಟರ್ ಒದಗಿಸುವ ಬಗ್ಗೆ ಕ್ರಮಕೈಗೊಳ್ಳುವರೆ ನ್ಯಾಕ್ ಪೀರ್ ಸಮಿತಿ ಸದಸ್ಯರು ತಿಳಿಸಿರುವುದರಿಂದ ಈ ಬಗ್ಗೆ ಮುಂದಿನ ದಿನಗಳಲ್ಲಿ ಕಾರ್ಯರೂಪಕ್ಕೆ ತರುವ ಬಗ್ಗೆ ನಿರ್ಧರಿಸಲಾಗಿದೆ.

ಸಂಘದ ವತಿಯಿಂದ ಮಂಗಳೂರು ವಿಶ್ವವಿದ್ಯಾನಿಲಯ ಅಧೀನ ಕಾಲೇಜಿನ ವಿದ್ಯಾರ್ಥಿಗಳಿಗೆ ಕ್ರೀಡಾ ಸ್ಪರ್ಧೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲು ನಿರ್ಧರಿಸಲಾಗಿದೆ.

ಪ್ರಸ್ತುತ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಅನಸೂಯ ರೈಯವರು ಸಂಘದ ಚಟುವಟಿಕೆಗಳಿಗೆ ಪೂರ್ಣ ಸಹಕಾರ ನೀಡುತ್ತಿರುವುದಕ್ಕಾಗಿ ಅವರಿಗೆ ಸಂಘವು ಕೃತಜ್ಞತೆಯನ್ನು ಸಲ್ಲಿಸುತ್ತದ.

ಹಳೆ ವಿದ್ಯಾರ್ಥಿ ಸಂಘದ ಎಲ್ಲಾ ಚಟುವಟಿಕೆಗಳಿಗೆ ಉತ್ತಮ ಸಲಹೆ ಸೂಚನೆಗಳನ್ನಿತ್ತು ಸಹಕರಿಸಿದ ವಿಶ್ವವಿದ್ಯಾನಿಲಯ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಪ್ರತಿಯೊಬ್ಬ ಹಳೆ ವಿದ್ಯಾರ್ಥಿ ಸದಸ್ಯರುಗಳಿಗೆ ಹಾಗೂ ಕಾಲೇಜಿನ ಲೆಕ್ಕ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಕೃಷ್ಣಯ್ಯ ಶೆಟ್ಟಿಗಾರ್ ಇವರುಗಳಿಗೆ ನಮ್ಮ ನಮನಗಳು ಹಾಗೂ ಧನ್ಯವಾದಗಳು. ಇನ್ನು ಮುಂದೆಯೂ ತಾವೆಲ್ಲರೂ ಸಂಘಕ್ಕೆ ಎಲ್ಲಾ ರೀತಿಯಲ್ಲೂ ಸಹಕಾರ, ಮಾರ್ಗದರ್ಶನ ಮತ್ತು ಸಹಾಯ ನೀಡಬೇಕೆಂದು ವಿನಂತಿಸುತ್ತಾ ಈ ವರದಿಯನ್ನು ಮುಕ್ತಾಯಗೊಳಿಸುತ್ತೇನೆ.

ಕಾರ್ಯದರ್ಶಿ






ENGLISH DEPARTMENT
RAJALAKSHMI

